

# ಮಲೆನಾಡು ಮೇಳ ಮಹಿಳಾ ಸಂಭ್ರಮ

ಮತ್ತೀಘಟ್ಟದ ಕೆಳಗಿನ ಕೇರಿಯಿಂದ ಬಂದಿದ್ದ ಲಕ್ಷ್ಮಿ ಸಿದ್ದಿ ಗುಂಪಿನವರು ತಂದಿದ್ದ ಗಡ್ಡೆ ಗೆಣಸು

**ಶಿರಸಿಯಲ್ಲಿ ಪ್ರತಿವರ್ಷ ಮುಂಗಾರಿನ ಆರಂಭದಲ್ಲಿ ನಡೆಯುವ ಮಲೆನಾಡು ಮೇಳ ಹೆಂಗಳೆಯರ ಪಾಲಿನ ಸಂತಸದ ಸಮಯವೆನಿಸಿದೆ. ಅಲ್ಲಿ ಪಾಲ್ಗೊಳ್ಳುವ ಮಹಿಳೆಯರಿಗೆ ತಾವು ತಂದ ಗಡ್ಡೆ, ಗೆಣಸು, ಹೂವಿನ ಗಿಡ, ತರಕಾರಿ ಬೀಜಗಳಿಂದ ಬರುವ ಆದಾಯಕ್ಕಿಂತ ಸಿಗುವ ಖುಷಿಯೇ ಮುಖ್ಯ.**

■ ಚಿತ್ರ– ಲೇಖನ:
**ಕೃಷ್ಣಿ ಶಿರೂರ**

ಶಿರಸಿಯ ವನಸ್ತ್ರೀ ಎನ್ನುವ ಸಂಘಟನೆ 15 ವರ್ಷಗಳಿಂದ ಮುಂಗಾರು ಆರಂಭದ ತಿಂಗಳಲ್ಲಿ ಬೀಜಮೇಳ ನಡೆಸಿಕೊಂಡು ಬರುತ್ತಿದೆ. ಬುಡಕಟ್ಟು ಜನಾಂಗದವರು ಸೇರಿದಂತೆ ವಿವಿಧ ವರ್ಗದ ಜನ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಅಷ್ಟೇ ಅಲ್ಲ ತಾವು ತರುವ ಗಡ್ಡೆ, ಗೆಣಸು ಮತ್ತಿತರ ತರಕಾರಿ ಬೀಜಗಳನ್ನು ಮಾರಾಟ ಮಾಡುತ್ತಾರೆ. ವ್ಯಾಪಾರದ ಜತೆ ಇಲ್ಲಿ ಪಾಲ್ಗೊಳ್ಳುವ ಸಂಭ್ರಮವನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಾರೆ.

ಈ ಮೇಳದಲ್ಲಿ ಕಳೆದ 10 ವರ್ಷಗಳಿಂದ ಪಾಲ್ಗೊಳ್ಳುತ್ತಿರುವ ಬುಡಕಟ್ಟು ಜನಾಂಗದ ಲಕ್ಷ್ಮಿ ಸಿದ್ದಿ , ರೇಣುಕಾ ಸಿದ್ದಿ, ಲತಾ ಸಿದ್ದಿ ಏಳು ಜಾತಿಯ ಗಡ್ಡೆಗಳನ್ನು ತಂದು ಮಾರಾಟ ಮಾಡುತ್ತಿದ್ದಾರೆ. ಅವರು ತರುವ ಕರಿ ಕೆಸು, ಬಿಳಿ ಕೆಸು, ಹಾಲು ಕೆಸು, ಮೊಟ್ಟೆ ಕೆಸು, ಗೆಣಸಿನ ಗಡ್ಡೆ, ಅಂಬೆಕೊಂಬು, ಕಾಡಅರಶಿಣ, ಅನಾನಸು, ಗೊನ್ನೆಗಡ್ಡೆ, ಸಸಿಗಳಿಗೆ ಇಲ್ಲಿ ಹೆಚ್ಚಿನ ಬೇಡಿಕೆ. ಬೆಲೆ ಕಡಿಮೆ ಹೇಳುವುದು ಕೂಡಾ ಅದಕ್ಕೆ ಕಾರಣ ಇರಬಹುದು.

‘ಅಷ್ಟೆಲ್ಲ ಕಷ್ಟಪಟ್ಟು ಇಷ್ಟು ಕಡಿಮೆ ದುಡ್ಡಿಗೆ ಕೊಡುವುದಾ?’ ಎಂದರೆ ಲಕ್ಷ್ಮಿ ಸಿದ್ದಿ ಅವರ ಸ್ನೇಹಿತೆಯರು ಹೇಳುವುದೇನು ಗೊತ್ತಾ– ‘ನಮ್ಗೆ ದುಡ್ಡು ಮುಖ್ಯ ಅಲ್ರಿ. ಖುಷಿ ಸಿಗ್ತದೆ. ಮಲೆನಾಡು ಮೇಳ ಅಂದ್ರೆ ನಮ್ಗೆ ಅದೇನೋ ಒಂಥರಾ ಹಿಗ್ಗು. ಇಲ್ಲೆಲ್ಲ ಬಂದು ಇವರ ಜೊತೆಯೆಲ್ಲ ಬೆರೆತು ಒಂದು ದಿನ ಕಳೆಯೋದು ಜಾತ್ರೆ ಇದ್ದಂಗೆ ನಮ್ಗೆ....’

ಇದೇ ಗಡ್ಡೆ ಗೆಣಸು ಲಕ್ಷ್ಮಿ ಸಿದ್ದಿ ಅವರನ್ನು ಬೆಂಗಳೂರಿನ ಮೇಳಕ್ಕೂ